ಪ್ರೈವೇಟ್ ಬಸ್ಸುಗಳು ಓಡಾಡುತ್ತಿವೆ ಎನ್ನುವ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಿ ಅವರ ಮೇಲೆ ಕ್ರಮ ವನ್ನೆಲ್ಲ ಕೈಗೊಳ್ಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.--ನನ್ನ ಹತ್ತಿರವಿರುವ ಮಾಹಿತಿಯ ಪ್ರಕಾರವಾಗಿ ಆ ರೀತಿಯಾಗಿ ಪರ್ಮಿಟ್ ಇಲ್ಲದೇ ಯಾವ ಬಸ್ಸುಗಳೂ ಓಡಾಡುತ್ತಿಲ್ಲ, ಮಾನ್ಯ ಸದಸ್ಯರ ಗಮನಕ್ಕೆ ಏನಾದರೂ ಆ ರೀತಿಯಾಗಿ ತಿಳಿದು ಬಂದಿದ್ದರೆ ತಿಳಿಸಿದರೆ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಎಚ್. ಎ. ನಾರಾಯಣ ಗೌಡ.--ಮಾನ್ಯ ಸಚಿವರ ಗಮನಕ್ಕೆ ಬಂದು ವಿಷಯ ಬಂದಿದೆಯೋ ಇಲ್ಲವೊ ಗೊತ್ತಿಲ್ಲ. ಇವತ್ತು ತಮಗೊಂದು ಉದಾಹರಣೆಯನ್ನು ಮಾಡುವುದಾದರೆ, ಬೆಂಗಳೂರಿನಿಂದ ಚಿಕ್ಕಮಂಗಳೂರಿಗೆ ಪ್ರತಿ ದಿನವೂ ರಾತ್ರಿ ಹೊತ್ತಿನಲ್ಲಿ ಬಸ್ಸುಗಳನ್ನು ಪ್ರೈವೇಟ್‌ನವರು ಓಡಿಸುತ್ತಿದ್ದಾರೆ. ನೆಲಮಂಗಲ, ತುಮಕೂರು ಮಧ್ಯದಲ್ಲಿ ಬರತಕ್ಕ ಊರುಗಳಲ್ಲಿಯೂ ಸಹ ಬಸ್‌ಗಳನ್ನು ನಿಲ್ಲಿಸಿ ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತಿದ್ದಾರೆ. ಇದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ? ಇದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೀರಿ ? ಇದರಿಂದ ಪ್ರತಿ ಪೋಲೀಸ್ ಠಾಣೆಯಲ್ಲೂ ಆ ಬಸ್ಸುಗಳ ಮಾಲೀಕರಿಂದ ಸಾಮೂಲು ತೆಗೆದುಕೊಳ್ಳತಕ್ಕ ಪರಿಸ್ಥಿತಿ ಉಂಟಾಗಿದೆ; ಇದರ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ ?

ಶ್ರೀ ಪಿ. ಮುನಿಯಪ್ಪ.--ಬಂದೇ ಲೈಸನ್ಸ್‌ನಲ್ಲಿ ರಾತ್ರಿ ಹಗಲು ಬಸ್ಸುಗಳನ್ನು ಓಡಿಸುತ್ತಿದ್ದಾರೆ ;ಆದರೆ ಕಡೆಗೂ ಸರ್ಕಾರದವರು ಗಮನ ನೀಡಬೇಕು.

ಉಪಾಧ್ಯಕ್ಷರು.--ಮಾನ್ಯ ಸದಸ್ಯರ ಭಾವನೆಗಳನ್ನು ಮಂತ್ರಿಗಳವರು ಅರ್ಥಮಾಡಿ ಕೊಂಡಿದ್ದಾರೆ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ ; ದಯವಿಟ್ಟು ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಂ. ಪಿ. ಪ್ರಕಾಶ್.--ಸನ್ಮಾನ್ಯ ಉಪಾಧ್ಯಕ್ಷರೇ, ಎಂಥಾ ಪರವಾನಗಿಯನ್ನು ತೆಗೆದುಕೊಂಡು ಖಾಸಗಿ ಬಸ್ಸು ಮಾಲೀಕರವರು ಸೂಚಿತ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸುತ್ತಿರುವುದರಿಂದ ಮಾನ್ಯ ಸದಸ್ಯರು ತಪ್ಪು ಗ್ರಹಿಸಿರಬಹುದು, ಇನ್ನು ಎರಡನೆಯದಾಗಿ ಪರವಾನಗಿ ಇಲ್ಲದೇ ಬಸ್ಸುಗಳನ್ನು ಓಡಿಸತಕ್ಕ ಸಂದರ್ಭವು ಕೂಡ ಇರಬಹುದು, ಅಂಥಾದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಕೂಡಲೇ ಕ್ರಮವನ್ನು ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ನೂರನೆಯದಾಗಿ ಆಲ್ ಇಂಡಿಯಾ ಪರ್ಮಿಟ್ ತೆಗೆದುಕೊಂಡು ಓಡಿಸುತ್ತಿರುವ ಬಗ್ಗೆ ಈಗಾಗಲೇ ನಾನು ಹೇಳಿದೆನೆ. ಆದುದರಿಂದ ಇದರ ಬಗ್ಗೆ ತಿದ್ದುಪಡಿಯನ್ನು ಕಳುಹಿಸಿದ್ದೇವೆ, ಅದು ಕೇಂದ್ರ ಸರ್ಕಾರದವರ ಗಮನದಲ್ಲಿದೆ ; ಅದರೆ ಅವರು ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಇದನ್ನು ಮುಂದೆ ನಡೆಯತಕ್ಕ ಸಾರಿಗೆ ಸಚಿವರ ಸಮ್ಮೇಳನದಲ್ಲಿ ಪ್ರಸ್ತಾಪಕ್ಕೆ ತಂದು ಇಂಥಾದನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಕೇಂದ್ರ ಸರ್ಕಾರದವರ ಮೇಲೆ ಇದರ ಬಗ್ಗೆ ಒತ್ತಡವನ್ನು ತಂದು ಇದನ್ನು ಸರಿಪಡಿಸುವುದಕ್ಕೆ ತಾವೆಲ್ಲರೂ ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಸಸ್ಪೆಂಡ್ ಮತ್ತು ವಜಾ ಆಗಿರುವ ನೌಕರರ ಬಗ್ಗೆ

135 ಶ್ರೀ. ಎಂ. ಎಸ್. ಕೃಷ್ಣನ್ (ರಾಜಾಜಿನಗರ).--ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೆ. ಎಸ್. ಆರ್, ಟಿ. ಸಿ. ಕಳೆದ 5 ವರ್ಷಗಳಲ್ಲಿ ಎಷ್ಟು ನೌಕರರನ್ನು ಅಡಚಿತ ವರ್ಗ ಸಸ್ಪೆಂಡ್ ಮಾಡಿದೆ (ಪ್ರತಿವರ್ಷಗಳ ಅಂಕಿ ಸಂಖ್ಯೆಗಳನ್ನು ಪ್ರತ್ಯೇಕವಾಗಿ ಕೊಡಿರಿ).

ಆ) ಈ ರೀತಿ ವಜಾ ಆಥವಾ ಸಸ್ಪೆಂಡ್ ಆಗಲು ಕಾರಣಗಳೇನು ?

ಇ) ವಿನಾ ಕಾರಣ ಅನೇಕ ನೌಕರರನ್ನು ಈ ರೀತಿಯ ಶಿಸ್ತಿನ ಕ್ರಮಗಳಿಗೆ ಒಳಪಡಿಸಲಾಗಿದೆ ಎಂಬ ದೂರು ಕೆ. ಎಸ್. ಆರ್. ಟಿ. ಸಿ. ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್‌ನಿಂದ ಬಂದಿದೆಯೇ ?

ಈ) ಕಾರ್ಮಿಕರ ಹಿತರಕ್ಷಣೆ ಮಾಡಲು ಹಾಗು ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?